ಅಫಿಷಿಯೇಟಿಂಗ್ ರಿಜಿಸ್ಟ್ರಾರ ಆಫೀಸ್.

ದಸ್ತಾವೇಜಿನ ನಂಬರು.	ದಸ್ತಾವೇಜಿನ ಮತ್ತು ಬಕ್ಕ ನಂಬರು.	ಕಕ್ಷಿಗಾರರು. ದಸ್ತಾವೇಜು ಬರದು ಕೊಟ್ಟವನ ಹೆಸರು ಮತ್ತು ತವಸೀಲ್.	ದಸ್ತಾವೇಜು ಬರಿಸಿ ಕೊಂಡವನ ಹೆಸರು ಯಾ ತವಸೀಲ್.	ದಸ್ತಾವೇಜಿನ ತಾರೀಖು.	ರಜಿಸ್ಟ್ರಿ ಬಗ್ಗೆ ಹಾಜರಾದ ತಾರೀಖು.	ರಜಿಸ್ಟ್ರಿ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ಬದಲಿಂಗನೇಟಿ ತಾಲ್ಲೂಕು ಸಬ್ ರಿಜಿಸ್ಟ್ರಿ ಆಫೀಸ್.	86-87ನೇ ಇಸವಿ 2ನೇ ಬುಕ್ಕು ನಂ. 2	ಅಂಕಿತಟ್ಟಿಹಳ್ಳಿ ವಾಣಿಕ್ಯ ಗೌಡನಮಗ ಮೈಲೇಗೌಡ	ತಿಮ್ಮಸಂದ್ರದ ಶಾನುಭಾಗ ಗುಂಡಪ್ಪ	..	85ನೇ ಇಸವಿ ಜನವರಿ 12	86ನೇ ಇಸವಿ ಆಗಸ್ಟು 7	ಬೇತಮಂಗಲದ ಹೋಬಳಿಗೊಲ್ಲಹಳ್ಳಿ ಕೆರೆಕೆಳಗಿನ ತರೀ ಜಮ್ಮಾ 237–244–246ನೇ ನಂಬರು ಬಗೆ ಆಧಾರ ವರಾಡಿ (250) ರೂಪಾಯಿಗಳು ತೆಗದುಕೊಂಡು ಇಧೇನೆಂದು
	86-87ನೇ ಇಸವಿ 2ನೇ ಬುಕ್ಕು ನಂ. 1	ಸೂಲಿಕುಂಟೆ ಶ್ರೀನಿವಾಸಾಚಾರ್ರು	ವಕ್ಕಲೇರಿಯಲ್ಲಿರುವ ಚೆರವೆಲು ನಾಗಪ್ಪನಮಗವರದಪ್ಪ	..	7–5–86	6—6—87	ಸೂಲಿಕುಂಟೆ ಗ್ರಾಮದ ಬಳಿ ಯಿರುವ ತೋಪಿನ ಹುಣಸೆಮರಗಳ ಫಸಲನಲ್ಲಿಮೂರಲ್ಲಿ ಬಂದು ಹಿಕ್ಕೆ (40) ರೂಪಾಯಿನ ಬಡ್ಡಿಗಾಗಿ ಭೋಗ್ಯಮಾಡಿರುತ್ತೆಂದು ವಗೈರೆ

ಅಬ್ದುಲ್‌ರಹಿಮಾ,
ಅಫಿಷಿಯೇಟಿಂಗ್ ರಿಜಿಸ್ಟ್ರಾರ.

ಸಿವಿಲ್ ಪ್ರೊಸಿಡ್ಯೂರ್ ಕೋಡ್ 30ನೇ ಪ್ರಕರಣದ ಮೇರಿಗೆ.

ಇಸ್ತಿಹಾರನಾಮೆ.

ಬೆಂಗಳೂರು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟ್‌ನಲ್ಲಿ.

ಸ್ 1888ನೇ ಇಸವಿ ಅರಿಜಿನಲ್ ವ್ಯಾಜ್ಯದ ನಂಬರ್ 1580.

ವಾದಿ.
ದೇಶಕುಲಕರ್ಣಿಕೆ ಸುಬ್ಬರಾಯಪ್ಪ ಮಾಲೂರು ತಾಲ್ಲೂಕು ನರಸಾಪುರ.

ಪ್ರತಿವಾದಿಗಳು.
1 ಮುಳಬಾಗಲು ಶ್ರೀಪಾದರಾಮರ ಮಠದ ಸ್ವಾಮಿಗಳಾದ ಸುಜ್ಞಾನನಿಧಿಗಳು.
2 ಸದರೀ ಮಠದ ಚಿಕ್ಕ ಸ್ವಾಮಿಗಳಾದ ಸುಧಿನಿಧಿಗಳು.
3 ಹೆಬ್ಬಣಿ ಕೇಷವಾಚಾರ್ರು.

ಇದರಿಂದ ಮಾಲೂರ್ ತಾಲ್ಲೂಕು ನರಸಾಪುರದಲ್ಲಿ ಇರುವ ಮೇಲ್ಕಂಡ ವಾದಿಯ ಸ್ವಕೀಯರಾದ ವಿಜಾಪುರದ ತಂಬಿಗೆಳಿಗೆ ತಿಳಿಯಪಡಿಸುವದೇನಂದರೆ, ಮೇಲ್ಕಂಡ ವ್ಯಾಜ್ಯದಲ್ಲಿ ವಾದಿಯು ಪ್ರತಿವಾದಿಗಳ ಮೇಲೆ ಮಾಡಿ ಇರುವ ದಾವಾದಲ್ಲಿ ವಾದಿಗಳಾಗಿ ಶೀರಿ ವ್ಯವಹಾರ ನಡಿಸಲು ಇಚ್ಛೈಯುಳ್ಳವರು ಯಿಲ್ಲರೂ 1889ನೇ ಇಸವಿ ಫಿಬ್ರವರಿ 14ನೇ ತಾರೀಖು ದಿವಿ 11 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗತಕ್ಕ ಬಗ್ಗೆ ಇದರಿಂದ ಸಕಲರಿಗೂ ತಿಳಿಯಪಡಿಸಿ ಇರುತ್ತೆ.

ಎತಾರೀಖು 18ನೇ ಮಾಹೆ ಡಿಸಂಬರ್ ಸ್ 1888ನೇ ಇಸವಿ.

ಸಿ. ಕ್ರೈಸ್,
ಸಬ್ ಜಡ್ಜಿ.

ಹಾಸನ ಡಿಸ್ಟ್ರಿಕ್ಟ್.

ತಾರೀಖು 17ನೇ ಡಿಸಂಬರ್ 1888ನೇ ಇಸವಿ.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟು ಮಂಜೆರಾಬಾದ್ ತಾಲ್ಲೂಕಿನ ಈ ಕೆಳಗೆ ನಮೂದಾಗಲ್ಪಡುವ ಜಮ್ಮಾ ಕಾಫಿ ಸಾಗುವಳಿಗೋಸ್ಕರ ಇದರ ಕೆಳಗಿನ ಸ್ಪೇಶೆಮೆಂಟಿನ ಷರತು ಶಾಲಂನಲ್ಲಿ ನಮೂದಾಗುವ ತಾರೀಖು ಮತ್ತು ಸ್ಥಳದಲ್ಲಿ ಮಂಜೆರಾಬಾದ್ ತಾಲ್ಲೂಕು ಆಮಲ್‌ದಾರ್‌ರವರ ರೂಬರೂ ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಹರಾಜು ಮಾಡಿಸಲ್ಪಡುವದು.